ವಿಶ್ವವಾಣಿ
# ವಿವಾಹ್
ಆನಂದದ ಆಲ್ಬಂ



ಮದುವೆ ಎಂಬುದು ವಯಸ್ಸಿಗೆ ಸಂಬಂಧಿಸಿದ್ದಲ್ಲ, ಸರಿಯಾದ ವ್ಯಕ್ತಿಯನ್ನು ಹುಡುಕಿ ಆಗುವುದೇ ಮದುವೆ.

**- ಸೋಫಿಯಾ ಬುಷ್**

ಪ್ರೀತಿ ದೌರ್ಬಲ್ಯವಲ್ಲ, ಪ್ರೀತಿ ಮದುವೆ ಎಂಬ ಸಂಸ್ಕಾರದಲ್ಲಿ ಪ್ರಬಲವಾಗಿದೆ.

**- ಬೋರಿಸ್ ಪಾಸ್ಟರ್ನಾಕ್**



ಬುಧವಾರ 25.03.2020

## ಗರ್ಭಾದಾನದಿಂದ ಶುರುವಾಗಿ ತರ್ಪಣವಿಧಿಯವರೆಗೂ ಸಾಗುವ ಸಂಸ್ಕಾರಗಳಲ್ಲಿ 'ವಿವಾಹ' ಅತ್ಯಂತ ಪ್ರಮುಖವಾದದ್ದು, ಭಾರತದಲ್ಲಿ ಮದುವೆಗೆ ಹೆಚ್ಚಿನ ಮಹತ್ವವಿದೆ.



# ಸಪ್ತಪದಿ ಏಳು ಜನ್ಮಗಳ ಅನುಬಂಧ

• **ಪ್ರತಿಭಾ ಜೋಷಿ** ಬೆಂಗಳೂರು

ಹೀಗೆ ಒಂದು ದಿನ ಬೇಸಿಗೆಯ ರಜೆಯಲ್ಲಿ ನಮ್ಮ ಅಜ್ಜಿಯ ಮನೆಯಲ್ಲಿ ಆರಾಮಾಗಿ ದಿನದ ಎಲ್ಲ ಕೆಲಸಗಳನ್ನು ಮುಗಿಸಿ ಟೈಮ್ ಪಾಸ್ ಮಾಡ್ತಾ ಇದ್ವಿ. ಎಂದಿನಂತೆ ನಮ್ಮ ಪ್ರೀತಿಯ ಅವ್ವಾ (ಅಜ್ಜಿ) ಟಿವಿ ಮುಂದೆ ಹಾಜರಾಗಿದ್ರು, ಅದೇ ಸೇಮ್ ಆಲ್ ಟೈಮ್ ಚಾಯ್ಸ್ ಒಲ್ಡ್ ರಾಜ್‌ಕುಮಾರ್ ಮೂವಿ ನೋಡ್ತಾ ಇದ್ರು, ಸೀನ್ಸ್ ಹ್ಯಾಪಿ ಆಗಿದ್ರೂ, ಅವರ ಕಣ್ಣಂಚಲ್ಲಿ ನೀರು ತುಂಬಿತ್ತು ಅದನ್ನು ನೋಡಿ ಕೇಳಿದೆ ಅವ್ವ ಏನಾಯ್ತು ಯಾಕೆ ಅಳ್ತಿದೀಯಾ ಅಂತ, ಆಗ ಅವ್ರು ಹೇಳಿದ್ರು ಪುಟ್ಟ ಇದು ಕಣ್ಣೀರಲ್ಲ ಆನಂದ ಭಾಷ್ಪ ಅಂತ.

ನನಗೆ ನಿಜವಾಗಿಯೂ ಅರ್ಥ ಆಗಲಿಲ್ಲ, ಕುತೂಹಲ ತಡಿಯಲು ಆಗದೆ ತಕ್ಷಣ ಕೇಳಿಯೇ ಬಿಟ್ಟೆ ಪ್ಲೀಸ್ ಅವ್ವ ಹೇಳು ಆನಂದ ಭಾಷ್ಪ ಏಕೆ ಬಂತು ಅಂತ. ಆಗ ಅವ್ರು ತಮ್ಮ ಜೀವನದ ನೆನಪಿನ ಬುತ್ತಿಯನ್ನು ಬಿಚ್ಚಿಡ್ತಾ ಹೋದ್ರು, ಅವತ್ತು ಅದನ್ನು ಕೇಳಿದ ನಂಗೆ ಕನಸಿನ ಲೋಕಕ್ಕೆ ಹೋದ ಭಾವ. ಅವ್ರು ತಮ್ಮ ಎಲ್ಲ ಹಳೆಯ ಸೀರೆಗಳು, ಒಡವೆಗಳು, ಮ್ಯಾರೇಜ್ ಫೋಟೋಸ್ ತೋರಿಸ್ತಾ ಹೋದ್ರು. ಆಗ ನನ್ನ ಮಂಕು ಬುದ್ಧಿಗೆ ಗೊತ್ತಾಯ್ತು ಓ ಅವ್ವನ ಆನಂದ ಭಾಷ್ಪದ ಸೀಕ್ರೆಟ್ ಅವರ ಮುದುವೆ ಸಿಹಿ ನೆನಪುಗಳು ಅಂತ. ಸಿನಿಮಾದಲ್ಲಿ ಬಂದಂಥ 'ಸಪ್ತ ಪದಿ ಇದು ಸಪ್ತಪದಿ' ಅನ್ನೋ ಹಾಡು ಅವರ ನೆನ ಪುಗ ಳನ್ನು ಮೆಲುಕು ಹಾಕುವಂತೆ ಮಾಡಿತ್ತು. ಆಗ ನಾನು ಡಿಸೈಡ್ ಆದೆ ಪಕ್ಕಾ ನಾನು ತಿಳ್ಕೊಬೇಕು ಅವ್ವನ ಮ್ಯಾರೇಜ್ ಸ್ಟೋರಿ ಅಂತ, ಆಗ ಹೇಳ್ತಾ ಹೋದ್ರು ಮದುವೆಯ ಸಪ್ತಪದಿ ಕ್ಷಣಗಳು ಹಾಗೂ ಅದರ ಮಹತ್ವ.

### ಅವ್ವ ನನಗೆ ಹೇಳಿದ ಸಪ್ತಪದಿ ಸ್ಟೋರಿ

ಸಂಸ್ಕಾರಗಳು ಮಾನವರ ಜೀವನದ ಅವಿಭಾಜ್ಯ ಅಂಶಗಳು. ಪುಂಸವನದಿಂದ(ಗರ್ಭಾದಾನ) ಮೊದಲುಗೊಂಡು ಕೊನೆಯದಾದ ತರ್ಪಣವಿಧಿಯ ವರೆಗೂ ಸಾಗುವ ಸಂಸ್ಕಾರಗಳಲ್ಲಿ 'ವಿವಾಹ' ಎಂಬುದು ಅತ್ಯಂತ ಪ್ರಮುಖವಾದದ್ದು. ಬಾಲ್ಯ, ಬ್ರಹ್ಮಚರ್ಯಗಳನ್ನು ದಾಟಿದಮೇಲೆ ಯೋಗ್ಯ ಸಂಗಾತಿಯನ್ನು ಆರಿಸಿಕೊಂಡು ಮುಂದಿನ ಇಡೀ ಆಯುಷ್ಯವನ್ನು ಕಳೆಯುವ ವಿವಾಹದಲ್ಲಿ ವಧುವರರು ಒಬ್ಬರಿಗೊಬ್ಬರು ಅನೇಕ ವಿಧವಾದ ವಚನ, ಪ್ರಮಾಣಗಳನ್ನಿತ್ತು ಆಮೂಲಕ ಸ್ಥಿರ ಹಾಗೂ ಸುಖೀ ಸಹಜೀವನಕ್ಕೆ ನಾಂದಿ ಹಾಡುತ್ತಾರೆ.

**ಮಾಂಗಲ್ಯಂ ತಂತುನಾನೇನ ಮಮ ಜೀವನ ಹೇತುನಾ**
**ಕಂಠೇ ಬಧ್ನಾಮಿ ಸುಭಗೇ ತ್ವಂ ಜೀವ ಶರದಾ ಶತಂ ||**

ಎಂಬ ಮೇಲಿನ ಮಂತ್ರ ಘೋಷದೊಂದಿಗೆ ವಧುವಿನ ಕೊರಳಲ್ಲಿ ಮಾಂಗಲ್ಯವನ್ನು ಕಟ್ಟಿ ಅವಳನ್ನು ಆ ಜೀವನ ಸಹಧರ್ಮಿಣಿಯಾಗಿಸಿಕೊಳ್ಳುತ್ತಾನೆ. ಪತಿ ಮುಂದಿನ ಶಾಸ್ತ್ರವಾದ 'ಸಪ್ತಪದಿ'ಗಳಲ್ಲಿ ಅವಳು ನಡೆಯುವ ಏಳು ಹೆಜ್ಜೆಗಳಲ್ಲೂ, ತಮ್ಮ ಬದುಕಿನ ಅತ್ಯಂತ ಪ್ರಭಾವಶಾಲಿಯಾದ ವಚನಗಳನ್ನು ಕೊಡುವ ಮಂತ್ರಗಳನ್ನು ಇಬ್ಬರೂ ಪ್ರಮಾಣ ಪೂರ್ವಕವಾಗಿ ನುಡಿಯುವ, ಅನನ್ಯ ಸಂಪ್ರದಾಯ ಹಿಂದೂ ವಿವಾಹ ಸಂಸ್ಕಾರದ ಮುಖ್ಯ ಅಂಶವಾಗಿದೆ. ಈ ಮಂತ್ರಗಳ ಮೂಲಕವೇ ಗಂಡ ಹೆಂಡತಿ ತಮ್ಮ ಕರ್ತವ್ಯ ಮತ್ತು ಬಾಧ್ಯತೆಗಳ ಕುರಿತು ಪರಸ್ಪರ ಪ್ರಮಾಣಗಳನ್ನು ನೀಡುತ್ತಾರೆ.

ಸಪ್ತಪದಿಗಿರುವ ಮಹತ್ವವನ್ನು ನಮ್ಮ ಹಿಂದೂ ಸಂಸ್ಕಾರದಲ್ಲಿ ವಿವರಿಸಿದ್ದು ಹೀಗೆ.

• **ಮೊದಲ ಹೆಜ್ಜೆ:** ಪತಿ ಪತ್ನಿಗೆ– 'ಈ ಮೊದಲ ಹೆಜ್ಜೆಯಲ್ಲಿ ನಮ್ಮಿಬ್ಬರ ಗೆಳೆತನ ಗಟ್ಟಿಯಾಗಿದೆ ಓ ಗೆಳತಿಯೇ, ನನ್ನ ಅನ್ನಾಹಾರಗಳನ್ನು ನೀನು ಒದಗಿಸುವೆ ಹಾಗೂ ನಮ್ಮಿಬ್ಬರಿಗೆ ಜನಿಸುವ ಮಕ್ಕಳ ಏಳಿಗೆ, ಶ್ರೇಯೋಭಿವೃದ್ಧಿಯನ್ನು ನಾನು ಮಾಡುತ್ತೇನೆ' ಎಂದು ಹೇಳುತ್ತಾನೆ.

**ಏಳು ಹೆಜ್ಜೆಗಳಲ್ಲೂ ತಮ್ಮ ಬದುಕಿನ ಅತ್ಯಂತ ಪ್ರಭಾವಶಾಲಿಯಾದ ವಚನಗಳನ್ನು ಕೊಡುವ ಮಂತ್ರಗಳನ್ನು ಇಬ್ಬರೂ ಪ್ರಮಾಣ ಪೂರ್ವಕವಾಗಿ ನುಡಿಯುವ ಅನನ್ಯ ಸಂಪ್ರದಾಯ ಹಿಂದೂ ವಿವಾಹ.**

ಪತ್ನಿ ಪತಿಗೆ– 'ನಿನ್ನ ದಯೆಯಿಂದ ಈ ಸೌಭಾಗ್ಯ ನನಗೆ ಪ್ರಾಪ್ತವಾಯಿತು. ನನ್ನ ಮನೆ, ಪತಿ ಮತ್ತು ಮಕ್ಕಳ ಬಗೆಗಿನ ನನ್ನ ಕರ್ತವ್ಯಗಳನ್ನು ನಾನು ನಿಷ್ಠೆಯಿಂದ ಪರಿಪಾಲಿಸುತ್ತೇನೆ' ಎನ್ನುತ್ತಾಳೆ.

• **ಎರಡನೇ ಹೆಜ್ಜೆ:** ಪತಿ ಪತ್ನಿಗೆ – 'ನೀನು ಈಗಾ ನನ್ನೊಡನೆ ಎರಡನೆಯ ಹೆಜ್ಜೆಯಿಟ್ಟಿರುವೆ, ನಮ್ಮ ಮನೆ ಮತ್ತು ಮಕ್ಕಳ ಸಕಲ ಶ್ರೇಯಸ್ಸನ್ನು ನೆರವೇರಿಸುವ ಶಕ್ತಿಯನ್ನು ನೀನು ನನ್ನಲ್ಲಿ ಊರ್ಜಿತಗೊಳಿಸು' ಎನ್ನುತ್ತಾನೆ.

ಪತ್ನಿಯು ಪತಿಗೆ –'ಓ ಪತಿದೇವನೇ, ಸುಖದುಃಖಗಳೆರಡರಲ್ಲಿಯೂ ನಾನು ನಿನ್ನ ಜತೆಯಿದ್ದು ಸಮಭಾಗಿಯಾಗುತ್ತೇನೆ. ಮೃದುವಚನಗಳಿಂದ ನಿನ್ನನ್ನು ಸುಖಿಯಾಗಿಡುತ್ತೇನೆ ಮತ್ತು ನೀನು ನನ್ನನ್ನು ಮಾತ್ರ ಪತ್ನಿಯಾಗಿ ಪ್ರೀತಿಸಬೇಕು. ನಾನು ಮನೆ ಮತ್ತು ಮಕ್ಕಳ ಕಾಳಜಿ ವಹಿಸುತ್ತೇನೆ' ಎಂದು ಎನ್ನುತ್ತಾಳೆ.

• **ಮೂರನೆಯ ಹೆಜ್ಜೆ:** ಪತಿ ಪತ್ನಿಗೆ– 'ಓ ಪ್ರಿಯಳೆ ನೀನು ಈಗಾ ನನ್ನೊಡನೆ ಮೂರನೆಯ ಹೆಜ್ಜೆ ಇಟ್ಟಿರುವೆ. ನನ್ನ ಸಕಲ ಸಂಪತ್ತು ಐಶ್ವರ್ಯಗಳೂ ನಮ್ಮಿಬ್ಬರದಾಗಿರುತ್ತವೆ. ನಿನ್ನ ಹೊರತಾಗಿ ನಾನು ಬೇರೆ ಹೆಣ್ಣು ಮಕ್ಕಳನ್ನು ಸೋದರಿ ಭಾವದಲ್ಲಿ ನೋಡುತ್ತೇನೆ. ನಾವಿಬ್ಬರೂ ನಮ್ಮ ಮಕ್ಕಳಿಗೆ ಯೋಗ್ಯ ಶಿಕ್ಷಣವಿತ್ತು ಸನ್ಮಾರ್ಗದಲ್ಲಿ ಬೆಳೆಸೋಣ' ಎನ್ನುತ್ತಾನೆ.

ಪತ್ನಿ ಪತಿಗೆ–'ಓ ಪತಿಯೇ ನಾನು ನಿನ್ನನ್ನು ನಿಷ್ಠೆಯಿಂದ ಪ್ರೀತಿಸುತ್ತೇನೆ. ನಿನ್ನ ವಿನಾ ಇತರ ಪುರುಷರು ನನಗೆ ಸೋದರ ಸಮಾನರು. ನನ್ನ ಪಾತಿವ್ರತ್ಯವನ್ನು ಆನಂದದಿಂದ ಪರಿಪಾಲಿಸುತ್ತೇನೆ ಎಂದು ಪ್ರಮಾಣ ನೀಡುತ್ತಾಳೆ.

• **ನಾಲ್ಕನೆಯ ಹೆಜ್ಜೆ:** ಪತಿ ಪತ್ನಿಗೆ– 'ಓ ಪ್ರಿಯಳೇ ನೀನು ನನ್ನೊಂದಿಗೆ ನಾಲ್ಕನೆಯ ಹೆಜ್ಜೆಯನ್ನು ಇಟ್ಟಿರುವುದು ನನ್ನ ಸುಕೃತ. ನೀನು ನನ್ನ ಬದುಕಿಗೆ ಪಾವಿತ್ರ್ಯವನ್ನು, ಶುಭವನ್ನು ತಂದಿರುವೆ. ನಾವಿಬ್ಬರೂ ಜತೆಯಾಗಿ ಉದಾತ್ತ ಮನಸ್ಕಮಕ್ಕಳನ್ನು ಪಡೆಯೋಣ. ಅವರು ಆಯುಷ್ಯವಂತರಾಗಲೆಂದು ಹಾರೈಸೋಣ' ಎನ್ನುತ್ತಾನೆ.

ಪತ್ನಿ ಪತಿಗೆ – 'ಓ ಪತಿಯೇ ನಾನು ಸಕಲ ಶೃಂಗಾರಗಳನ್ನೂ ಕೇವಲ ನಿನಗೋಸ್ಕರ ಮಾಡಿಕೊಳ್ಳುತ್ತೇನೆ, ಆಭರಣಗಳನ್ನು ಧರಿಸುತ್ತೇನೆ. ನಿನ್ನನ್ನೂ ಶ್ರೀಗಂಧಾದಿಗಳಿಂದ ಅಲಂಕರಿಸುತ್ತೇನೆ. ಸಕಲ ವಿಧದಲ್ಲಿಯೂ ನಿನ್ನನ್ನು ಸುಖಿಯಾಗಿ ಇಡುತ್ತೇನೆ' ಎನ್ನುತ್ತಾಳೆ.

• **ಐದನೆಯ ಹೆಜ್ಜೆ:** ಪತಿ ಪತ್ನಿಗೆ –' ಓ ಪ್ರಿಯೇ ನನ್ನೊಡನೆ ಐದನೆಯ ಹೆಜ್ಜೆ ಇಟ್ಟಿರುವ ನೀನು ನನ್ನ ಬದುಕನ್ನು ಸಮೃದ್ಧಗೊಳಿಸಿರುವೆ. ಭಗವಂತನ ಕೃಪೆ ನಿನಗಿರಲಿ, ನಮ್ಮ ಪ್ರೀತಿ ಪಾತ್ರರೆಲ್ಲರೂ ದೀರ್ಘಾಯುಗಳಾಗಲಿ ಮತ್ತು ನಮ್ಮ ಸಮೃದ್ಧಿಯಲ್ಲಿ ಪಾಲ್ಗೊಳ್ಳಲಿ' ಎನ್ನುತ್ತಾನೆ.

ಪತ್ನಿ ಪತಿಗೆ – ' ನಿನ್ನ ಸುಖ ಮತ್ತು ಸಂತೋಷಗಳೆರಡನ್ನೂ ನಾನು ಹಂಚಿಕೊಳ್ಳುವೆ. ನಿನ್ನ ಪ್ರೀತಿ ವಿಶ್ವಾಸಗಳು ನಿನ್ನ ಮೇಲಿನ ಗೌರವವನ್ನು ಹೆಚ್ಚಿಸುತ್ತವೆ. ನಿನ್ನನ್ನು ಸಕಲ ವಿಧದಲ್ಲಿಯೂ ನಾನು ಸುಖಿಯಾಗಿ ಇರಿಸುವೆ' ಎನ್ನುತ್ತಾಳೆ.

• **ಆರನೆಯ ಹೆಜ್ಜೆ:** ಪತಿ ಪತ್ನಿಗೆ – 'ಪ್ರಿಯಳೇ ನನ್ನೊಡನೆ ಆರನೆಯ ಹೆಜ್ಜೆಯಿಟ್ಟು ನೀನು ನನ್ನ ಹೃದಯದಲ್ಲಿ ಆನಂದವನ್ನೂ ಶಾಂತಿಯನ್ನೂ ತುಂಬಿರುವೆ. ಇದೇ ರೀತಿಯಾಗಿ ನೀನು ನನ್ನ ಮನಸ್ಸನ್ನು ಆನಂದದಿಂದ ತುಂಬುತ್ತಾ ಇರು' ಎನ್ನುತ್ತಾನೆ.

ಪತ್ನಿ ಪತಿಗೆ – 'ಸ್ವಾಮಿಯೇ ನಿನ್ನ ಎಲ್ಲ ಸತ್ಕರ್ಮಗಳಲ್ಲಿಯೂ ನಮ್ಮ ಪ್ರಾಪಂಚಿಕ ಸಮೃದ್ಧಿಯಲ್ಲಿಯೂ, ಮತ್ತು ಶಾಂತಿ ಸಮಾಧಾನಗಳನ್ನು ಪಾಲ್ಗೊಳ್ಳುತ್ತಾ ಪಡೆಯುವಲ್ಲಿಯೂ ನಾನು ಸದಾ ಸರ್ವದಾ ನಿನ್ನೊಡನೆ ಇರುತ್ತೇನೆ' ಎನ್ನುತ್ತಾಳೆ.

• **ಏಳನೆಯ ಹೆಜ್ಜೆ:** ಪತಿ ಪತ್ನಿಗೆ – 'ಪ್ರಿಯ ಪತ್ನಿಯೇ ನನ್ನೊಡನೆ ನೀನು ಏಳು ಹೆಜ್ಜೆಗಳನ್ನು ಇಟ್ಟಿದ್ದು ನಮ್ಮ ಸ್ನೇಹ, ಸಂಬಂಧಗಳು ಈಗ ಚಿರಂತನವಾಗಿವೆ. ನಮಗೆ ಭಗವಂತನ ಸಾಕ್ಷಾತ್ಕಾರವಾಗಿದೆ. ನೀನೀಗ ಸಂಪೂರ್ಣ ನನ್ನವಳಾಗಿದ್ದು ನನ್ನ ಜೀವನವು ನಿನ್ನದೇ, ನಮ್ಮ ಈ ವಿವಾಹವು ಅಮರವಾಗಲಿ'ಎನ್ನುತ್ತಾನೆ.

ಪತ್ನಿ ಪತಿಗೆ – 'ಓ ಪತಿಯೇ ವೇದಶಾಸ್ತ್ರಾನುಸಾರ ನಾನೀಗ ನಿನ್ನ ಪತ್ನಿಯಾಗಿರುವೆ, ನಾವಿಬ್ಬರೂ ಮನಃಪೂರ್ವಕವಾಗಿ ಈ ಪ್ರಮಾಣಗಳನ್ನು ಮಾಡಿದ್ದೇವೆ. ನಾವಿಬ್ಬರೂ ಪರಸ್ಪರ ನಿಷ್ಠೆಯಿಂದ ಬಾಳೋಣ. ನಮ್ಮ ಪ್ರೇಮವು ಅಮರವಾಗಲಿ' ಎನ್ನುತ್ತಾಳೆ. ಎಲ್ಲ ಹೇಳಿ ಮುಗಿಸಿ ನನ್ನು ಗಟ್ಟಿಯಾಗಿ ಅಪ್ಪಿಕೊಂಡು ಪುಟ್ಟ ನಿನ್ನ ಮದುವೆಯೂ ಇದೆ ರೀತಿ ಆಗ್ಲಿ, ಜೀವನದ ಉದ್ದಕ್ಕೂ ಅದನ್ನು ನೆನಸಿಕೊಂಡು ಆನಂದ ಭಾಷ್ಪ ಹಾಕೋ ಹಾಗೆ ಆಗ್ಲಿ. ಇದು ನಿನ್ನ ಪ್ರೀತಿಯ ಅವ್ವನ ಹಾರೈಕೆ ಆಶೀರ್ವಾದ ಅಂತ ಅಂದ್ರು. ತಕ್ಷಣ ನನಗೆ ಗೊತ್ತಾಗದ ಹಾಗೆ ಕಣ್ಣಲಿ ನೀರು ತುಂಬಿಕೊಳ್ತು.

ಅವ್ವನ ಈ ಕಥೆ ಕೇಳಿ ಎಷ್ಟೋ ವರ್ಷಗಳು ಆದ್ರೂ ಇನ್ನು ನನ್ನ ಕಣ್ಣುಗಳಲ್ಲಿ, ಕಿವಿಗಳಲ್ಲಿ ಅವ್ವನ ಆ ಧ್ವನಿ ಸದ್ದು ಮಾಡ್ತಾ ಇರುತ್ತೆ. ಹಾಗೂ ಆ ಸಪ್ತಪದಿಯ ಮಹತ್ವ ಅರಿವಿಗೆ ಬರುತ್ತೆ. ಈ ರೀತಿ ನನ್ನ ಸುಖ ಸಂಸಾರದ ಸೂತ್ರ ಅವ್ವ ನಂಗೆ ಹೇಳಿಕೊಟ್ಟಿದ್ರು. ಅದಕ್ಕೆ ಹೇಳೋದು ಅಜ್ಜಿ ಕಥೆಗಳ್ನ ಕೇಳೋ ಮಜಾನೇ ಬೇರೆ ಅಂತ.



### ಸಪ್ತಪದಿ ಮಂತ್ರ

**ಪತಿ ಪತ್ನಿಯರು ತಮ್ಮ ಮುಂದಿನ ಜೀವನವನ್ನು ಸುಖಮಯವಾಗಿ ಕಳೆದು ಸಾರ್ಥಕಗೊಳಿಸಿಕೊಂಡು, ಸಂತಾನಾಭಿವೃದ್ಧಿ ಮಾಡಿ, ವಂಶವನ್ನು ಉದ್ಧರಿಸಿ ಕೊನೆಗೆ ಮೋಕ್ಷದತ್ತ ಸಾಗುವ ಪಾಠ ವನ್ನು ಹೇಳಿಕೊಡುವುದೇ ಸಪ್ತಪದಿ ಮಂತ್ರಗಳು.**

# ನಿನ್ನ ನೆನಪಿನ ಉಸಿರಲಿ



• **ರಾಜು.ಕೆ ಬಳ್ಳಾರಿ**

ಮಳೆಗಾಲದ ಆರಂಭದ ದಿನಗಳು ಗಾಳಿಯು ತಂಪಾಗಿ ಬೀಸುತ್ತಿತ್ತು ಅಂದು ಎಂದಿನಂತೆ ನನ್ನ ಕೆಲಸವನ್ನು ಮುಗಿಸಿಕೊಂಡು ಊರಿಗೆ ಹೋಗಬೇಕೆಂದು ಬೈಕ್ ತೆಗೆದುಕೊಂಡು ಊರಿಗೆ ಹೊರಟೆ. ಮಳೆ ಬರುವ ಮುನ್ಸೂಚನೆ ಇದ್ದುದರಿಂದ ಬೇಗ ಬೈಕ್ ಸ್ಪೀಡ್ ಹೆಚ್ಚಿಗೆ ಮಾಡಿದೆ ಅಷ್ಟರಲ್ಲಿಯೇ ತುಂತುರು ಹನಿ ಶುರುವಾಯಿತು. ಸ್ವಲ್ಪ ದೂರದಲ್ಲೇ ಹಳ್ಳಿಯ ಬಸ್‌ಸ್ಟ್ಯಾಂಡ್ ಕಾಣುತ್ತಿದ್ದರಿಂದ ಅಲ್ಲಿಗೆ ಹೋದ ನಂತರ ಒಂದು ಸುಂದರವಾದ ಹುಡುಗಿ ನಿಂತಿದ್ದನ್ನು ಕಂಡು 'ಸುತ್ತಮುತ್ತ ಯಾರೂ ಇಲ್ಲ, ನಾನೇ ನೀನು ಇಲ್ಲಿ ಎಲ್ಲ ಬಾರೆ ಸನಿಹಕ್ಕೆ ಕೆಂಪು ಕೆನ್ನೆಗೆ ಕೊಡುವೆ ಒಂದು ಮುತ್ತು' ಎಂದು ಕನಸು ಕಂಡೆನು.

ಮಳೆಯಲ್ಲಿ ತೋಯಿಸಿಕೊಂಡು ನಿಂತುಕೊಂಡಿದ್ದರಿಂದ ನಾನು ನಡುಗುವುದನ್ನು ಕಂಡು ಅವಳು ಒಂದು ಟವಲ್ ಕೊಟ್ಟು, ತಲೆಯನ್ನು ಒರೆಸಿಕೊಳ್ಳಿ ಇಲ್ಲ ಅಂದ್ರೆ ನೆಗಡಿ, ಜ್ವರ ಬರುತ್ತೆ ಎಂದು ಪ್ರೀತಿಯಿಂದ ಹೇಳಿದಳು. ಟವೆಲ್ ತೆಗೆದುಕೊಂಡು ತಲೆಯನ್ನು ಒರೆಸಿಕೊಳ್ಳುತ್ತಾ ಅವಳನ್ನು ನೋಡ ತೊಡಗಿದೆನು. ಹಿಂದೆಂದೂ ಈ ದಾರಿಯಲ್ಲಿ ಈ ಹುಡುಗಿಯನ್ನು ನೋಡಿರಲಿಲ್ಲ, ಸುಂದರವಾದ ದುಂಡನೆಯ ಮುಖ, ಕಣ್ಣುಗಳಲ್ಲಿ ಅದೆಂತಹ ಸೆಳೆತ. ಪಿಂಕ್ ಪಿಂಕ್ ಚೂಡಿದಾರ, ಓಪನ್ ಹೇರ್, ಸುಂದರವಾದ ರಾಜಕುಮಾರಿಯಂತೆ ಇದ್ದುದನ್ನು ಕಂಡು ನಾನು ಅವಳ ಕಣ್ಣಿನ ಸೆಳೆತಕ್ಕೆ ಫಿದಾ ಆಗಿದ್ದೆ. ನನ್ನ ಹೃದಯದಲ್ಲಿ ಮೂಡುತ್ತಿದೆ ಪ್ರೇಮ ತರಂಗ, ಎದೆಯೊಳು ಹಾರುತ್ತಿದೆ ಪ್ರೀತಿ ಪತಂಗ... ನೀ ಎದುರು ಬಂದಾಗ ಬರಸೆಳೆವ ಅನುರಾಗ... ಮನದೊಳಗೆ ಶುರುವಾಯಿತು ಹೊಸದಾದ ಆ ವೇಗ... ಆಗ ನನ್ನನ್ನು ನಾನೇ ಮರೆತುಬಿಟ್ಟೆ.

### ಅವಳ ನೋಟಕ್ಕೆ ಮನಸೋತ ಹೃದಯ

ಪ್ರತಿ ಬಾರಿ ಅವಳ ಮುಖವನ್ನು ನೋಡಿದ ತಕ್ಷಣ ಹೃದಯ ಬಡಿತ ಹೆಚ್ಚಾಗುತ್ತಿತ್ತು. ಅವಳ ಪಕ್ಕದಲ್ಲಿ ಹೋಗಿ ಮಾತನಾಡಿಸೋಣ ಎಂದರೆ ಮೊದಲೇ ಅವಳ ನೋಟಕ್ಕೆ ನಾನು ಮಾರು ಹೋಗಿದ್ದೆ. ಬಸ್‌ಸ್ಟ್ಯಾಂಡ್ ಸುತ್ತಮುತ್ತ ರಸ್ತೆಯಲ್ಲಿ ಯಾರೂ ಇರಲಿಲ್ಲ ನಮ್ಮಿಬ್ಬರ ನಡುವೆ ಮೌನ ಮನೆಯಾಗಿತ್ತು. ಮನದಲ್ಲಿಯೇ ಅಳುಕು, ಭಯವಿತ್ತು. ಮಳೆಯ ಚಿಟಪಟ ಸದ್ದು ಮಾತ್ರ ಜೋರಾಗಿ ಅಬ್ಬರಿಸುತ್ತಿತ್ತು. ಆ ಮುಂಗಾರಿನ ಮಳೆ ಇನ್ನೂ ಬರಲಿ ಅಂತ ದೇವರಲ್ಲಿ ಬೇಡಿಕೊಳ್ಳುತ್ತಿದ್ದೆ. ಏಕೆಂದರೆ ಅದಾಗ ತಾನೇ ಪ್ರೀತಿಯೆಂಬ ಬೀಜ ಮೊಳಕೆ ಹೊಡೆಯುತ್ತಿದ್ದು, ತಲೆಬುರುಡೆ ಇಲ್ಲದ ನೂರೆಂಟು ಮನಸ್ಸಿನ ಭಾವನೆಗಳಿಗೆ ಸಹಾಯ ಮಾಡಿದ್ದು ಮಳೆಯೇ.

### ಕಿರುನಗೆ ಬೀರಿದ ಸುಂದರಿ

ಬರೀ ಅವಳ ಕಣ್ಣಿನ ಸೆಳೆತಕ್ಕೆ ಸೋತು ಹೆಸರೇ ಗೊತ್ತಿಲ್ಲದ ಹುಡುಗಿಯ ಹಿಂದೆ ಹೋಗಿ ನನಗೂ ಪ್ರೀತಿಯಾಗಿದೆ ಎಂದು ಖುಷಿ ಪಡುತ್ತಾ ಮುಂಗಾರಿನ ಮಳೆಯ ಹನಿಯಲ್ಲಿ ಕುಣಿದು ಕುಪ್ಪಳಿಸುತ್ತಿದ್ದೆ. ಇದನ್ನು ಕಂಡ ಅವಳ ಮುಖದಲ್ಲಿ ಸಣ್ಣನೆ ಕಿರುನಗೆ ಮೂಡಿದಾಗ, 'ಹೇ ಪ್ರೇಯಸಿಯೇ ನಿನ್ನ ನಗುವೇ ನನ್ನ ಮನದ ನಂದಾದೀಪ, ನೀನೇ ನನ್ನ ಹೃದಯದ ಅನುರೂಪ' ಎಂದು ಮನಸ್ಸಿನಲ್ಲೇ ಹೇಳಿಕೊಳ್ಳುತ್ತಾ ಮುಂಗಾರು ಮಳೆಯ ಸ್ವಾತಿ ಮುತ್ತಿನ ಮಳೆಯೊಂದಿಗೆ ನನ್ನ ಜತೆ ಇದ್ದ,ಆ ಸುಂದರಿ ಯಾರೆಂದು ಕೇಳಲು ಧೈರ್ಯ ಬಾರದೆ ಅವಳ ಜತೆಯಲ್ಲಿ ನಿಂತುಕೊಂಡೆ. ಅದೇ ಕೊನೆ ಅದೇ ಮೊದಲಾದರೂ ಆಕೆಯ ಪ್ರತಿಬಿಂಬ ಮನದಲ್ಲಿ ಹಾಗೆ ಮುದ್ರಣವಾಗಿದೆ. ಮಳೆ ಬರುವ ಸಮಯದಲ್ಲಿ, ಆ ಬಸ್‌ಸ್ಟ್ಯಾಂಡ್‌ನಲ್ಲಿ ಯಾರಾದರೂ ಒಬ್ಬಳು ಹುಡುಗಿ ನಿಂತಿದ್ದರೆ ಅವಳೇ ಅನ್ನಿಸುತ್ತದೆ. ಆ ರಾಜಕುಮಾರಿಗೆ ಧನ್ಯವಾದ ಹೇಳಲು ಹುಡುಕುತ್ತಿದ್ದೇನೆ. ನೀನು ನನಗೆ ಸಹಾಯ ಮಾಡಿದ ಒಳ್ಳೆಯ ಗುಣಕ್ಕೆ ನಾನು ಮನಸೋತಿರುವೆ. ಅಂದು ಥ್ಯಾಂಕ್ಸ್ ಹೇಳಲು ಮಾತು ಮೌನವಾಗಿತ್ತು. ಇಂದು ಹೇಳಬೇಕೆನಿಸುತ್ತಿದೆ ಆದರೆ ನೀನು ಸಿಗುತ್ತಿಲ್ಲ. ಈ ಬಾರಿ ಮಳೆಯ ಬರುವ ವೇಳೆಗೆ ನಿನಗಾಗಿ ಅದೇ ಬಸ್‌ಸ್ಟ್ಯಾಂಡ್‌ನಲ್ಲಿ ಕಾಯುತ್ತಿದ್ದೇನೆ. ಮತ್ತೆ ಮಳೆಯಲ್ಲಿ ಅದೇ ಬಸ್‌ಸ್ಟ್ಯಾಂಡ್‌ನಲ್ಲಿ ನೆನೆದು ನಿಂತಿರುವೆ ಟವೆಲ್ ಹಿಡಿದು ಬಾ ಗೆಳತಿ.

---

• **ರಂಗನಾಥ.ಎನ್ ವಾಲ್ಮೀಕಿ** ಸೂಳೇಭಾವಿ

ಇಂದಿನ ಒತ್ತಡದ ಬದುಕಿನಲ್ಲಿ ಜೀವನದ ಜಂಜಾಟದಲ್ಲಿ ಮದುವೆ, ಮುಂಜಿ ಇನ್ನಿತರ ಶುಭ ಕಾರ್ಯಗಳಿಗೆ ಹಾಜರಾಗಲು ಆಗದೇ ಇರುವ ಪರಿಸ್ಥಿತಿಗಳು ಒಮ್ಮೊಮ್ಮೆ ಸೃಷ್ಟಿಯಾಗುತ್ತವೆ. ಆದರೆ ಅವುಗಳನ್ನು ಬಿಡುವಂತಿಲ್ಲ, ಹೋಗದಿದ್ದರೆ ಒಂದು ಹೋಗಿ ಇನ್ನೊಂದು ಆಗುವುದು. ಹೀಗಿರಲು ಆಪ್ತರ ಶುಭ ಕಾರ್ಯಗಳಿಗೆ ಅದಕ್ಕಿಂತ ತೀರಾ ತುರ್ತು ಕಾರಣಗಳನ್ನು ಹೊರತುಪಡಿಸಿ ಉಳಿದೆಲ್ಲಾ ಸಂದರ್ಭದಲ್ಲಿ ಹೋಗುತ್ತೇವೆ. ಆದರೆ ಕರೆದರೂ ಬಾರದ ಅದೆಷ್ಟೊ ಜನರ ನಡುವೆ, ಇನ್ನೂ ಕರೆಯದಿದ್ದರೆ ಬರುವವರೇ? ಖಂಡಿತಾ ಬರಲಾರರು. ಆಗ ಕರೆಯದಿರುವುದಕ್ಕೆ ಅವರು ಬರದಿರುವುದಕ್ಕೆ ಆಮೇಲೆ ಮಾನಸಿಕ ತೊಳಲಾಟ ಪೇಚಾಟ ಎರಡೂ ಆಗುತ್ತವೆ.

ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಮನೆಯಲ್ಲಿ ಯಾವುದಾದರೂ ಶುಭ ಕಾರ್ಯ ಇದ್ದರೆ ತಿಂಗಳಾನುಗಟ್ಟಲೇ ಮೊದಲೇ ಪರಸ್ಪರ ಚರ್ಚಿಸಿ ಸಂಬಂಧಿಕರು, ಆಜುಬಾಜು ಮನೆಯವರು, ಓಣಿಯ ಜನರು, ದೂರದ ಆಪ್ತರು ಹೀಗೆ ವಿಂಗಡಣೆ ಮಾಡಿಕೊಂಡು ಪಟ್ಟಿ ಮಾಡಿಕೊಳ್ಳುವರು.

ಈ ಮೊದಲು ವಿವಾಹ ಪತ್ರ ನೀಡುವ ಪರಿಪಾಠ ಇರಲಿಲ್ಲ. ಮದುವೆ ಹಿಂದಿನ ದಿನ ಮೌಖಿಕವಾಗಿ ಹೋಗಿ ಹೇಳುವ ರೂಢಿಯಿತ್ತು. ಕ್ರಮೇಣ ಮದುವೆ ಕಾರ್ಡ್ ವಿತರಣೆ ವಿವಾಹದ ಪ್ರಮುಖ ಕಾರ್ಯ ಕೂಡ ಆಗಿತ್ತು. ಅಗತ್ಯಕ್ಕಿಂತ ಹೆಚ್ಚು ಕಾರ್ಡ್ ಮಾಡಿಸಿ ತಿಂಗಳು ಮುಂಚೆನೆ ಅವುಗಳಲ್ಲಿ ಹೆಸರನ್ನು ನೆನಪಿಸಿಕೊಂಡು ಬರೆದಿಡುವುದು. ಬಂಧು ಬಾಂಧವರನ್ನು ಕರೆದು ಮೊದಲು ಎಲ್ಲರಿಗೂ ಹೋಗಿ ಕಾರ್ಡ್ ನೀಡುವುದು. ಮದುವೆ ಹಿಂದಿನ ದಿನ ಊರಿನವರಿಗೆ, ಪರಿಚಿತರಿಗೆ, ಓಣಿಯವರಿಗೆ ಕಾರ್ಡ್ ನೀಡುವ ಪರಿಪಾಠ ಇದೆ. ನಾವು ಎಷ್ಟೇ ಮುನ್ನಚ್ಚರಿಕೆ ವಹಿಸಿದ್ದೇವೆ ಎಂದರೂ ಒಮ್ಮೊಮ್ಮೆ ಆಪ್ತರಿಗೆ, ತುಂಬಾ ಪರಿಚಿತರಿಗೆ ಹೇಳುವುದು ಮರೆತು ಬಿಟ್ಟಿರುತ್ತೇವೆ. ಆಗ ಅವರು ಬೇಸರ ಮಾಡಿಕೊಂಡು ನಂಗೆ ಮದುವೆಗೆ ಹೇಳಿಲ್ಲ ಎಂದು ತಿಳಿದು ಮಾತುಕತೆಗೆ ವಿರಾಮ ನೀಡುವರು. ಇನ್ನೂ ಕೇಲವರೂ ವಿಶಾಲ ಭಾವನೆಯಿಂದ ಮದುವೆ ಕಾರ್ಯದ ಒತ್ತಡದಲ್ಲಿ ಮರೆತಿರಬಹುದು ಎಂದು ತಿಳಿಯುವರು. ಇನ್ನು ಕೇಲವರೂ ಸಂಕುಚಿತ ಮನೋಭಾವದವರು ಬೇಕಂತಲೆ ಹೇಳಿಲ್ಲ ಅಂತನೂ ತಿಳಿಯುವವರು. ಅವರವರ ಭಾವಕ್ಕೆ ಬಿಟ್ಟ ವಿಚಾರ.






# ಹೇಳಬಾರದೆಂದಲ್ಲ ಮರೆತಿರುತ್ತೇವೆ

### ಕಣ್ತಪ್ಪಿನಿಂದಾಗಿ ಹೇಳಿರುವುದಿಲ್ಲ

ಮದುವೆ ಕಾರ್ಯ ಮುಗಿದ ಮೇಲೆ ಮನಸ್ಸು ಒತ್ತಡ ರಹಿತವಾಗಿ ಇದ್ದಾಗ ಪಟ್ಟನೆ ಅವರ ಹೆಸರು ನೆನಪಿಗೆ ಬಂದು, ಅಯ್ಯೋ ಅವರನ್ನು ಕರೆಯಲಿಲ್ಲ ಎಂದು ನೊಂದುಕೊಳ್ಳುತ್ತೇವೆ. ಈ ಹಿಂದಿನ ಶುಭ ಕಾರ್ಯದ ಪಟ್ಟಿಯಲ್ಲಿ ಎಡಿಟ್, ಕಟ್ ಕಾರ್ಯ ನಡೆಯುವುದು ಮತದಾರರ ಪಟ್ಟಿ ಪರಿಷ್ಕರಿಸಿದಂತೆ. ಇಲ್ಲಿಯೂ ಅದೆಷ್ಟೊ ಜನ ಊರಲ್ಲಿ ಇರರು, ಆದರೂ ಹೇಳಿರುತ್ತೇವೆ. ಇಲ್ಲದವರಿಗೆ ಬಹುತೇಕ ಆಮಂತ್ರಣ ತಲುಪಿರುತ್ತದೆ. ಕಣ್ತಪ್ಪಿನಿಂದಾಗಿ ಹೇಳಬೇಕಾದವರಿಗೆ ಹೇಳಿರುವುದಿಲ್ಲ.ಇದಕ್ಕಿಂತ ಮಿಗಿಲಾದ ಅನೇಕ ವಿವಾಹ ಕಾರ್ಯ ಮಾಡಿರುತ್ತೇವೆ.ಇದೇ ಬಹಳ ಮುಖ್ಯಅಂತ ಆಮೇಲೆ ಅನಿಸುವುದು.

### ಅನ್ಯಥಾ ಭಾವಿಸಬೇಡಿ

ಇತ್ತೀಚಿಗೆ ಕೇಲವರು ಈ ತೊಳಲಾಟ ಬೇಡ, ನಾವೂ ಕರೆದಿಲ್ಲ ಅನ್ನುವ ಮಾತು ಬರಬಾರದೆಂದು ಪತ್ರಿಕೆ ಜಾಹೀರಾತಿಗೆ ಮೊರೆ ಹೋಗಿದ್ದಾರೆ. ಪತ್ರಿಕೆಯಲ್ಲಿ ವಿವಾಹ ವಿವರ ಜಾಹೀರಾತು ನೀಡಿ ಸಮಯದ ಅಭಾವದಿಂದ ಕಾರ್ಯದ ಒತ್ತಡಗಳಿಂದ ಸ್ವತಃ ಮನೆಗೆ ಬಂದು ಕರೆಯಲು ಆಗಲಿಲ್ಲ. ಈ ಕಾರಣ ಅನ್ಯಥಾ ಭಾವಿಸದೇ ಇದುವೇ ಪ್ರೀತಿಯ ಆಮಂತ್ರಣ ಎಂದು ಭಾವಿಸಿ ಮದುವೆಗೆ ಬರಲು ವಿನಂತಿ ಎಂದು ಹಾಕುವರು. ಇನ್ನು ಮುಂದುವರೆದು ಇತ್ತೀಚಿಗೆ ಸಾಮಾಜಿಕ ಜಾಲತಾಣಗಳಾದ ವಾಟ್ಸಾಪ್, ಫೇಸ್‌ಬುಕ್ ಇತರ ಸಾಮಾಜಿಕ ಜಾಲತಾಣಗಳ ಮೂಲಕ ವಿವಾಹಕ್ಕೆ ಆಮಂತ್ರಣ ನೀಡುವರು. ಒತ್ತಡದಲ್ಲಿ ಇರುವವರು, ವಿವಾಹಕ್ಕೆ ಹೋಗಲು ಆಗದವರು ಮರಳಿ ಸಾಮಾಜಿಕ ಜಾಲತಾಣಗಳ ಮೂಲಕವೇ ಶುಭ ಕೋರುವವರು. ಹೀಗೆ ಹಂತ ಹಂತವಾಗಿ ವಿವಾಹಕ್ಕೆ ಕರೆಯುವ ಪದ್ಧತಿಯಲ್ಲಿ ಹಲವೂ ಬದಲಾವಣೆ ಆದರೂ ಅದೆಷ್ಟೋ ಮುಂಜಾಗ್ರತೆ ವಹಿಸಿದರೂ ನಮ್ಮ, ನಮ್ಮ ಮನೆಯಲ್ಲಿ ನಡೆಯುವ ವಿವಾಹ ಕಾರ್ಯಗಳಿಗೆ ತುಂಬಾ ಪರಿಚಿತರನ್ನು, ಆಪ್ತರನ್ನೇ ಮದುವೆಗೆ ಕರೆ ಯುವುದು ಮರೆತಿರುತ್ತೇವೆ. ಹೇಳಬಾರದೆಂದಲ್ಲ ಆದರೂ ಮರೆತಿರುತ್ತೇವೆ.

---

## ಭಾರತೀಯ ಸಂಸ್ಕೃತಿಯಲ್ಲಿ ಅರಿಶಿನ ಕುಂಕುಮಕ್ಕೆ ಶ್ರೇಷ್ಠ ಸ್ಥಾನವಿದೆ. ದೇವತಾ ಕಾರ್ಯ, ಶುಭಕಾರ್ಯಗಳಲ್ಲಿ ಅರಿಶಿನ ಕುಂಕುಮ ಇದ್ದರೆ ಹೆಚ್ಚು ಶೋಭೆ. ಹಳದಿ ನಮ್ಮ ಸಂಸ್ಕೃತಿಯ ಪ್ರತೀಕವೂ ಹೌದು.

# ಶುಭ ಸಂಕೇತದ ಪ್ರತೀಕ ಅರಿಶಿನ



• **ಹೇಮಾ ವೆಂಕಟೇಶ**,ಬಾಗಲಕೋಟೆ

ನಮ್ಮ ಸಂಸ್ಕೃತಿ ಸಂಸ್ಕಾರದಲ್ಲಿ, ಸಂಪ್ರದಾಯಗಳಲ್ಲಿ ಅರಿಶಿನ ಕುಂಕುಮದ ಬಳಕೆ ಸರ್ವೇ ಸಾಮಾನ್ಯ. ಈ ಅರಿಶಿನ ಕುಂಕುಮದ ಬಳಕೆ ಎಲ್ಲಿಂದ ಹುಟ್ಟಿರಬಹುದು ಎಂದು ಹೇಳುವುದು ಕಷ್ಟ. ಅರಿಶಿನಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ಹಿಂದೂ ಪಂಪರೆಗಳಲ್ಲಿ ಅನಾದಿ ಕಾಲದಿಂದಲೂ ಅರಿಶಿನ ಕುಂಕುಮ ಬಳಕೆಯಲ್ಲಿದೆ. ಮೊದಲು ಕಾಡಿನಲ್ಲಿ ವಾಸಿಸುತ್ತಿದ್ದ ಮಾನವ ನಾಗರಿಕನಾಗಿ ಬದಲಾಗುವ ಅವಧಿಯಲ್ಲಿಯೇ ಔಷಧೀಯ ಗುಣವುಳ್ಳ ಅರಿಶಿನ ಕುಂಕುಮವನ್ನು ಬಳಕೆ ಮಾಡಲು ಪ್ರಾರಂಭಿಸಿದ್ದ.

### ಮದುವೆ ಒಂದು ಹಬ್ಬ

ಹಲವಾರು ಸಂಪ್ರದಾಯಗಳು ಮತ್ತು ಕಾರ್ಯಕ್ರಮಗಳಿಂದ ಕೂಡಿದ ಮದುವೆ ಒಂದು ಹಬ್ಬ. ಹಿಂದಿನ ಕಾಲದಲ್ಲಿ ಐದು ದಿನಗಳ ಕಾಲ ಹಬ್ಬದಂತೆ ಮದುವೆಯನ್ನು ಮಾಡುತ್ತಿದ್ದರು. ಅದು ಈಗ ಸಂಕ್ಷಿಪ್ತಗೊಂಡಿದೆ, ಅದರೂ ಈ ಐದು ದಿನಗಳ ಆಚರಣೆ ಬಿಟ್ಟಿಲ್ಲ ಅದನ್ನು ಚಿಕ್ಕದಾಗಿಯಾದರು ಮಾಡಿಕೊಂಡು ಬರುತ್ತಿದ್ದಾರೆ. ಹಲವಾರು ಅರಿಶಿನ ಶಾಸ್ತ್ರವನ್ನು 'ಹಳದಿ ರಸಂ' ಎಂದು ಜೋರಾಗಿ ಆಚರಣೆ ಮಾಡುತ್ತಾರೆ.

### ದೇವತೆಗಳಿಗೂ ಅರಿಶಿನ ಶಾಸ್ತ್ರ

ದೇವತಾ ಕಲ್ಯಾಣದಲ್ಲಿಯೂ ಸಹ ಅರಶಿನ ಶಾಸ್ತ್ರ ಮಾಡುತ್ತಾರೆ, ಶ್ರೀರಾಮ ಕಲ್ಯಾಣ, ಶ್ರೀನಿವಾಸ ಕಲ್ಯಾಣ ಮಾಡುವಾಗಲೂ ಸಹ ಅರಸಿನ ಸ್ನಾನವನ್ನು ದೇವತೆಗಳಿಗೆ ಮಾಡಿಸಿ ನಂತರ ವಧು ವರರ ಅಲಂಕಾರವನ್ನು ಮಾಡುತ್ತಾರೆ. ದೇವತೆಗಳಿಗೆ ಲೇಪಿಸಿದ ಆ ಚಂದನ ಮಿಶ್ರಣವನ್ನು ಮದುವೆಯಾಗುವ ಹುಡುಗ ಮತ್ತು ಹುಡುಗಿಯರಿಗೆ ಕೊಡುತ್ತಾರೆ.

### ಆಕರ್ಷಕ ಅರಿಶಿನ



**ವಿಶಿಷ್ಟ ಬಣ್ಣಗಳಿಂದ ಆಕರ್ಷಕವಾಗಿರುವ ಅರಿಶಿನ ಮತ್ತು ಕುಂಕುಮ ಸೌಂದರ್ಯ ಅಲಂಕಾರಿಕ ವಸ್ತುವು ಹೌದು. ಹೆಣ್ಣಿನ ಸೌಂದರ್ಯವನ್ನು ಹೆಚ್ಚಿಸುವ ಕುಂಕುಮ, ಅರಿಶಿನವು ಶುಭದ ಸಂಕೇತದ ಪ್ರತೀಕ. ಮದುವೆಯನ್ನುವ ಪವಿತ್ರ ಸಂಗಮದಲ್ಲಿ ಹಲವಾರು ಶಾಸ್ತ್ರ ಮತ್ತು ಸಂಪ್ರದಾಯಗಳು ಹಿಂದಿನಿಂದಲೂ ನಡೆಯುತ್ತಾ ಬಂದಿವೆ. ಆ ಸಂಪ್ರದಾಯಕ್ಕೆ ತನ್ನದೇ ಆದಂತಹ ಮಹತ್ವ ಇದೆ. ಅದರಂತೆ ಸಂಡಿಗೆ ಮುಹೂರ್ತ, ಲಗ್ನ ಪತ್ರ ಕಟ್ಟಿಸುವಿಕೆ, ದೇವರಿಗೆ ಮತ್ತು ಹಿರಿಯರಿಗೆ ಪೂಜೆ ಮಡುವುದು, ಮದರಂಗಿ ಶಾಸ್ತ್ರ, ಅರಶಿನ ಶಾಸ್ತ್ರ, ಬಳೆ ಶಾಸ್ತ್ರ, ಹೇಗೆ ಇಷ್ಟೆಲ್ಲ ಶಾಸ್ತ್ರಗಳ ನಂತರ ವರಪೂಜೆ ಮದುವೆಯಲ್ಲಿ ಇರುತ್ತದೆ.**

### ಸಾಂಪ್ರದಾಯಿಕ ಶಾಸ್ತ್ರ

ಮದುವೆಗೂ ಮುನ್ನ ವಧು ಮತ್ತು ವರನಿಗೆ ಮಾಡುವ ಒಂದು ಸಾಂಪ್ರದಾಯಿಕ ಶಾಸ್ತ್ರ ಅರಶಿನ ಶಾಸ್ತ್ರ. ಅರಶಿನ ಮತ್ತು ಕುಂಕುಮ ಎಲ್ಲ ಶುಭ ಕಾರ್ಯಗಳಿಗೆ ಮೊಟ್ಟ ಮೊದಲು ಉಪಯೋಗಿಸುವ ವಸ್ತುಗಳು. ಅರಶಿನ ಹಚ್ಚುವುದರಿಂದ ಯಾವುದೇ ರೀತಿಯ ದೃಷ್ಟಿ ಮಧುಮಕ್ಕಳಿಗೆ ಆಗುವುದಿಲ್ಲ, ಯಾವುದೇ ದೋಷಗಳಿದ್ದರು ಅವು ಪರಿಹಾರವಾಗುತ್ತವೆ, ಮತ್ತು ಯಾವುದೇ ರೀತಿಯ ಆಪತ್ತು ಮಧುಮಕ್ಕಳಿಗೆ ಬರುವುದಿಲ್ಲ ಎಂಬ ನಂಬಿಕೆ ಇದೆ. ಆದ್ದರಿಂದ ಅರಶಿನ ಶಾಸ್ತ್ರದ ಸಂಪ್ರದಾಯವನ್ನು ನಮ್ಮ ಹಿರಿಯರು ರೂಢಿಯಲ್ಲಿ ಇಟ್ಟಿದ್ದಾರೆ. ಈ ಶಾಸ್ತ್ರಕ್ಕೆ ಹಳದಿ ಸೀರೆಯನ್ನು ವಧು ಅಥವಾ ವರನಿಗೆ ತೊಡಿಸುತಾರೆ, ಇತ್ತೀಚಿನ ಟ್ರೆಂಡ್ ಏನೆಂದರೆ ಹಳದಿಶಾಸ್ತ್ರದ ದಿನ ಬಂಧು ಮಿತ್ರರೂ ಸಹ ಹಳದಿ ವಸ್ತ್ರಗಳನ್ನು ಧರಿಸುವುದು ವಿಶೇಷ. ಈ ಶಾಸ್ತ್ರವನ್ನು ಮದುವೆಯ ದಿನ ಮಾಡುತ್ತಾರೆ. ಕೆಲವರು ಒಂದು ದಿನದ ಮುಂಚೆ ಕೂಡ ಮಾಡುತ್ತಾರೆ.

### ಹಳದಿ ತಯಾರಿಸುವುದು ಹೇಗೆ

ಇತ್ತೀಚೆಗೆ ಅಂಗಡಿಗಳಲ್ಲಿ ಸಿಗುವ ಅರಿಶಿನದ ಪುಡಿಯನ್ನು ಹೆಚ್ಚಾಗಿ ಉಪುಯೋಗಿಸುತ್ತಾರೆ. ಇದರ ಬದಲು ನೈಸರ್ಗಿಕವಾಗಿ ಮನೆಯಲ್ಲಿಯೇ ಅರಿಶಿನದ ಕೊಂಬನ್ನು ಪುಡಿ ಮಾಡಿಕೊಂಡು ಹಳದಿ ತಯಾರಿಸಿಕೊಂಡರೆ ಒಳ್ಳೆಯದು.

**ಹಳದಿ ಲೇಪನ ತಯಾರಿ**

1 )ಅರಶಿನಪುಡಿಗೆ ಹಾಲು ಬೆರಸಿ ಪೇಸ್ಟ್ ಮಾಡಿಕೊಳ್ಳಬಹುದು.
2 )ನೀರಿನೊಂದಿಗೆ ಅರಿಶಿನಪುಡಿ ಬೆರೆಸಿ ಪೇಸ್ಟ್ ತಯಾರಿಸಿ.
3 )ಅರಶಿನ ಮತ್ತು ಗಂಧದ ಪುಡಿ ಸೇರಿಸಿ ನೀರಿನೊಂದಿಗೆ ಮಿಶ್ರಣ ಮಾಡಿ.
4 )ಗುಲಾಬಿಜಲ(ರೋಜ್‌ವಾಟರ್) ಮತ್ತು ಅರಿಶಿನವನ್ನು ಮಿಶ್ರಣಮಾಡಿ ಲೇಪನ ಮಾಡಿಕೊಳ್ಳಿ.

### ಅತೀ ಮುಖ್ಯ ಅರಿಶಿನ

**ಅರಶಿನವನ್ನು ಕೇವಲ ಮದುವೆಗೆ ಅಲ್ಲದೆ ಋತುಮತಿ ಕಾರ್ಯಕ್ರಮ, ನಾಮಕರಣದಲ್ಲಿ ಮಕ್ಕಳಿಗೆ ಮತ್ತು ಮಧು ಮಕ್ಕಳಿಗೆ ಹಚ್ಚುವುದುಂಟು, ಕೇವಲ ಅರಶಿನದ ನೀರಲ್ಲದೆ ಬಣ್ಣದ ನೀರು, ಹೂಗಳನ್ನು ಹಾಕುತ್ತಾರೆ. ಕಾರ್ಯಕ್ರಮಕ್ಕೆ ಬಂದಂತಹ ದಂಪತಿಗಳೆಲ್ಲರು ಜೋಡಿ ಜೋಡಿಯಾಗಿ ಅರಶಿನ ಮತ್ತು ಬಣ್ಣದ ನೀರನ್ನು ವಧು-ವರರಿಗೆ ಹಾಕುತ್ತಾರೆ. ಅಂದ ಚಂದ ತರುವಂತಹ ಅರಶಿನ ತನ್ನದೆಯಾದಂತಹ ಗುಣಗಳನ್ನು ಹೊಂದಿದೆ, ಸಾಕಷ್ಟು ವೈದ್ಯಕೀಯ ಗುಣಗಳನ್ನು ಅರಶಿನ ಹೊಂದಿದೆ. ಜತೆಗೆ ಅರಿಶಿನದಲ್ಲಿ ಆ್ಯಂಟಿಸೆಪ್ಟಿಕ್ ಗುಣವಿರುವುದರಿಂದ ಅಡುಗೆಯಲ್ಲೂ ಸಹ ಬಳಸುತ್ತಾರೆ.**

### ಚರ್ಮದ ಕಾಂತಿ ಹೆಚ್ಚಳ

ಅರಿಶಿನ ಆ್ಯಂಟಿಸೆಪ್ಟಿಕ್ ಗುಣ ಹೊಂದಿರುವುದರಿಂದ ವಧು-ವರರಿಗೆ ಹಚ್ಚಿದರೆ ಯಾವುದೇ ರೀತಿಯ ಇನ್ಫೆಕ್ಷನ್ ಮದುವೆಯ ಸಮಯದಲ್ಲಿ ಆಗುವುದಿಲ್ಲ, ಚರ್ಮ ಕಾಂತಿಯುತವಾಗಿರುತ್ತದೆ, ಹೊಸ ಲವಲವಿಕೆ ಮುಖದಲ್ಲಿ ಎದ್ದು ಕಾಣುತ್ತದೆ. ಮೊಡವೆಗಳು ಬರದಂತೆ ತಡೆಯುತ್ತದೆ.

ಬಿಸಿಲಿಗೆ ಮುಖದಲ್ಲಿ ಆಗುವ ಟ್ಯಾನ್‌ಅನ್ನು ಕೂಡ ತಡೆಯುತ್ತದೆ. ಅರಶಿನ ಹಚ್ಚುವುದರಿಂದ ಹೊಸ ಕಳೆ ಮುಖದಲ್ಲಿ ಕಾಣುತ್ತದೆ. ಅರಶಿನ ಶಾಸ್ತ್ರದ ನಂತರ ಮಧು ಮಕ್ಕಳ ಮುಖದಲ್ಲಿ ನಿಜವಾದ ವಧು-ವರರ ಲಕ್ಷಣ ಕಂಡುಬರುತ್ತದೆ.